ಬುದ್ಧಿವಂತಿಕೆಯ ಆಟ ಆಡಿದ್ದೀರಿ ಅಲ್ಲವಾ ಸಾರ್... ನಿಮ್ಮ ಹಸಿವಿಗೆ ಬಲಿಯಾದದ್ದೂ ಅಲ್ಲದೇ ಈಗ ಆಕೆ ಏನೂ ಮಾಡಲಾಗದ ಪರಿಸ್ಥಿತಿ ತಂದೊಡ್ಡಿದ್ದೀರಿ... ರಾಜಕೀಯದವರಿಗಿಂತಾ ಹೆಚ್ಚಿನ ಚಾಲಾಕಿತನ ಸರ್ ನಿಮ್ಮದು..." ಗಂಭೀರವಾಗಿಯೇ ಹೇಳಿದ ಎಸಿಪಿ ಶಿವಣ್ಣ.

"ನಿಮಗೆ ಮಂಜುಳಾ ಹೇಗೆ ಸಿಕ್ಕಳು? ರಜೆ ಹಾಕಿ ಕಳುಹಿಸಿದ್ದೀವಲ್ಲ..." ಸಣ್ಣ ಸ್ವರದಲ್ಲಿ ಕೇಳಿದರು. ಅವರಿಗೆ ಅರ್ಥ ಆಗಿತ್ತು, ನಿಜ ಗೊತ್ತಾಗಿದೆ ಎಂದು. ಅದನ್ನು ಹೇಗೆ ನಿಭಾಯಿಸಬೇಕು ಎಂಬುದು ತಿಳಿಯುತ್ತಿಲ್ಲ.

"ನಿಮ್ಮ ಫಾರಂ ಹೌಸ್ ಬಳಿ ನಮ್ಮ ಇನ್‌ಫಾರ್ಮರ್ ಇದ್ದರು... ಯಾರನ್ನೂ ಸುಲಭವಾಗಿ ಬಿಡದ ಅವರು ಇವಳನ್ನು ಯಾವುದೇ ಪ್ರಶ್ನೆ ಕೇಳದೆಯೇ ಒಳಬಿಟ್ಟರು. ಅಂದರೆ ಅವಳಿಗೂ ಆ ಫಾರಂ ಹೌಸ್‌ಗೂ ಸಂಬಂಧ ಇದೆ ಎಂದು ತಿಳಿದು ಅವಳನ್ನು ಸ್ವಲ್ಪ ಜಬರದಸ್ತ್ ಮಾಡಿದಾಗ ಎಲ್ಲ ಬಾಯಿ ಬಿಟ್ಟಳು..."

ಜಗದೀಶಚಂದ್ರ ಅವರ ಬಿಪಿ ಏರತೊಡಗಿತ್ತು. ಇಡೀ ದೇಹ ನಡುಗತೊಡಗಿತು. ಸಾವರಿಸಿಕೊಳ್ಳುತ್ತಾ, "ಇದರಲ್ಲಿ ನಾನೊಬ್ಬನೇ ಅಲ್ಲ... ಶಿವಣ್ಣ... ಮೇಲಿನವರೂ... ಕೆಳಗಿನವರೂ ಎಲ್ಲರೂ ಭಾಗಿಗಳೇ... ಅಕಸ್ಮಾತ್ ನಿಜ ಹೊರಬಂದರೆ ಇಡೀ ವ್ಯವಸ್ಥೆಯ ಮೇಲೇ ಪ್ರಶ್ನೆಗಳು ಏಳುತ್ತಿದ್ದವು. ಎಲ್ಲರೂ ಉಳಿಯಬೇಕು, ಎಲ್ಲರೂ ಬದುಕಬೇಕು, ಎಲ್ಲರ ಸಾರ್ವಜನಿಕ ಜೀವನವೂ ಕಳಂಕರಹಿತ ಆಗಿರಬೇಕು. ಹಾಗಾಗಿ ಈ ನಾಟಕ!'' ತೊದಲುತ್ತಲೇ ಮಾತನಾಡುತ್ತಿದ್ದರು... ಜೀವನದಲ್ಲಿ ಮಾಡಿದ ಮಹಾಪರಾಧ ಧುತ್ತನೆ ಎದುರಿಗೆ ನಿಂತು ಅದಕ್ಕೆ ತೆರಿಗೆ ಬೇಡತೊಡಗಿತ್ತು.

ಏರಿದ ಬಿಪಿ ಇಳಿಯಲಿಲ್ಲ... ಇಡೀ ದೇಹ ಕಂಪನದಿಂದ ನಡುಗಿ ಸುಮ್ಮನಾಯಿತು.

"ಸಾರ್ ಸಾರ್" ಎಂದು ಎದೆಯ ಮೇಲೆ ಕೈಯನ್ನಿಟ್ಟು ಒತ್ತತೊಡಗಿದ ಶಿವಣ್ಣ. ಪ್ರತ್ಯುತ್ತರ ನೀಡಲಾಗದ ಪರಿಸ್ಥಿತಿಯಲ್ಲಿ ಇದ್ದರು. ಕಷ್ಟಪಟ್ಟು ಕೈ ಮುಗಿದರು... ಕಣ್ಣಲ್ಲಿ ಪಶ್ಚಾತ್ತಾಪ... ನಡುಗುವ ಧ್ವನಿಯಲ್ಲಿಯೇ, ''ನನ್ನನ್ನು ಉಳಿಸಬೇಡಿ, ನನ್ನ ಗೌರವ ಹಾಳು ಮಾಡಬೇಡಿ.'' ಶಿವಣ್ಣ ಅದ್ಯಾವುದೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ... ಅವನಗಿದ್ದದ್ದು ಒಂದೇ... 'ಮನುಷ್ಯ ಕೆಟ್ಟವನಿರಲಿ... ಒಳ್ಳೆಯವನಿರಲಿ... ಎಲ್ಲರಿಗೂ ಬದುಕುವ ಹಕ್ಕಿದೆ... ಸೇವ್ ಹಿಮ್!' ಕಾರು ಶರವೇಗದಲ್ಲಿ ಆಸ್ಪತ್ರೆ ಕಡೆಗೆ ತಿರುಗಿತು.


**ವಾಸುದೇವ ಮೂರ್ತಿ ಪಿ.**

ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ಆಗಿರುವ ವಾಸುದೇವ ಮೂರ್ತಿ ಅವರ ಊರು ಶಿವಮೊಗ್ಗ. ಪ್ರಸ್ತುತ ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ.

ಮೊದಲಿನಿಂದಲೂ ಪತ್ತೇದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೇದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿದೆ.